**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ **333/2020** ದಿನಾಂಕಃ **10.11.2025**

ಪಿ.ಡಬ್ಲ್ಯೂಃ **1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಬಿ ಸಿ ಎಸ್ ವಕೀಲರಿಂದ**

1. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು. 2016 ರಲ್ಲಿ ನನ್ನ ಮತ್ತು ನರಸಿಂಹಪ್ಪ ಇತನೊಂದಿಗೆ ಧರ್ಮಸ್ಥಳದಲ್ಲಿ ವಿವಾಹ ಆಗಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ನಾನು ಹಾಜರು ಮಾಡಿದ ದಾಖಲೆಗಳು ನನ್ನ ವಿವಾಹ ಸಾಭೀತುಪಡಿಸುವ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಲಪದ್ದತಿಯಂತೆ ವರ ಮತ್ತು ವಧು ನೋಡುವ ಶಾಸ್ತ್ರ ಮಾಡುತ್ತಾರೆ ಎಂದರೆ ಸರಿ. ನರಸಿಂಹಪ್ಪನ ವಿವಾಹ ಮಾಡದಕೆರೆಯ ತಿಮ್ಮಯ್ಯನಹಟ್ಟಿ ತಿಮ್ಮಪ್ಪನ ಮಗ ಹನುಮಂತಪ್ಪ ಮತ್ತು ಶಂಕರಮ್ಮ ರವರ ಮಗಳು ರೂಪಾ ಇವರೊಂದಿಗೆ ನನ್ನ ಜೊತೆ ವಿವಾಹ ಆಗುವ ಮೊದಲೇ ಆಗಿರುತ್ತದೆ ಎಂದರೆ ಸರಿ . ಸದರಿ ರೂಪಾ ಇಂದಿಗೂ ಜೀವಂತ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರೂಪಾ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ನಿಪಿ-1 ರ ಪ್ರಮಾಣ ಪತ್ರವನ್ನು ನನ್ನ ಗಂಡ ನರಸಿಂಹಪ್ಪ ನನಗೆ ನೀಡಿರುತ್ತಾರೆ. ನಾನು ನಿಪಿ-1 ನ್ನು ನರಸಿಂಹಪ್ಪ ರವರಿಂದ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರಿಂದ 10 ರ ಪೋಟೋಗಳು ನನ್ನ ಮತ್ತು ನರಸಿಂಹಪ್ಪನ ನಡುವೆ ವಿವಾಹ ಆದ ಪೋಟೋಗಳಾಗಿರುವುದಿಲ್ಲ ಎಂದರೆ ಸರಿಯಲ್ಲ . ಸದರಿ ಪೋಟೋಗಳನ್ನು ಧರ್ಮಸ್ಥಳದಲ್ಲಿ ಹೊಡೆಸಿದ್ದು ಬೆಂಗಳೂರಿನ ಸ್ಟೂಡಿಯೋದಲ್ಲಿ ಡೆವಲಪ್

ಮಾಡಿಸಿರುತ್ತೇವೆ. ಸದರಿ ಪೋಟೋಗಳನ್ನು ನನ್ನ ಮೈದುನಾ ಮಂಜು ರವರು ತೆಗೆದಿರುತ್ತಾರೆ . ಸದರಿ ಪೋಟೋಗಳನ್ನು ಮೊಬೈಲ್ ಪೋನ್ ನಲ್ಲಿ ತೆಗೆದಿರುತ್ತಾರೆ. ಅದು ಯಾವ ಮೊಬೈಲ್ ಆಗಿರುತ್ತದೆ ಎಂದು ನನಗೆ ತಿಳಿದಿಲ್ಲ ಮತ್ತು ಹಾಜರು ಮಾಡಿರುವುದಿಲ್ಲ. ಹಾಜರು ಮಾಡಲಾಗುತ್ತದೆಯೇ ಎಂದರೆ ಸಾಕ್ಷಿ ತನ್ನ ಮೈದುನ ತೆಗೆದುಕೊಡುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮಂಜುನಾಥ ನನ್ನ ಮೈದುನ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

3. ನಿಪಿ -1 ರ ಪೋಟೋದಲ್ಲಿ ಇರುವ ವ್ಯಕ್ತಿಗೂ ಮತ್ತು ಇತರೆ ಪೋಟೋಗಳಲ್ಲಿ ಇರುವ ವ್ಯಕ್ತಿಗೂ ವ್ಯತ್ಯಾಸಗಳು ಇರುತ್ತವೆ ಎಂದರೆ ಸರಿ . ನಾನು ಪ್ರತಿವಾದಿಯರ ಒಟ್ಟುಕುಟುಂಬಕ್ಕೆ ಸೇರಿದ ಸದಸ್ಯೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ನರಸಿಂಹಪ್ಪನಿಗೆ ಕುಡಿತದ ಚಟ ಇತ್ತು ಎಂದರೆ ಸರಿಯಲ್ಲ . ಕುಡಿತದ ಚಟದಿಂದಲೇ ನರಸಿಂಹಪ್ಪ ಅಪಘಾತವಾಗಿ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ . ಸದರಿ ನರಸಿಂಹಪ್ಪ ಯಾವ ರೀತಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯರ ಒಟ್ಟು ಕುಟುಂಬದ ಸದಸ್ಯೆ ಎಂದು ತೋರಿಸಲು ಪಡಿತರ ಚೀಟಿ ಹಾಜರು ಮಾಡಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ .

4. ಮಾಡದಕೆರೆಯ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಇರುವ ಬಗ್ಗೆ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ. 1 ನೇ ಪ್ರತಿವಾದಿಯ ಗಂಡ ರಂಗಪ್ಪನಿಗೆ ಒಟ್ಟು 4 ಜನ ಸಹೋದರರು, ಇಬ್ಬರು ಸಹೋದರಿಯರು . ಅವರ ಹೆಸರುಗಳು ಶಾರದಮ್ಮ, ಲಕ್ಷ್ಮಕ್ಕ. ಸದರಿ ಶಾರದಮ್ಮ ಮತ್ತು ಲಕ್ಷ್ಮಕ್ಕ ಜೀವಂತ ಇರುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಹಳ್ಳ , ಪಶ್ಚಿಮಕ್ಕೆ ನಾಗಪ್ಪನ ಸ್ವತ್ತು, ದಕ್ಷಿಣ ದಿಕ್ಕಿಗೆ ಪ್ರಸನ್ನ ರವರ ಸ್ವತ್ತು , ಉತ್ತರ ದಿಕ್ಕಿಗೆ ಟಾರ್ ರಸ್ತೆ . ದಾವಾ ಸ್ವತ್ತಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಅದು

5 ಮುಕ್ಕಾಲು ಎಕರೆ ಇರುತ್ತದೆ. ಈಗ ನಾನು ಹೇಳಿದ ಚಕ್ಕುಬಂದಿಯಲ್ಲಿ ದಾವಾ ಜಮೀನು ಇರುವುದಿಲ್ಲ , ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

5. ನಾನು ನರಸಿಂಹಪ್ಪನ ಹೆಂಡತಿ ಆಗಿರದಿದ್ದರೂ ಪ್ರತಿವಾದಿಯರಿಗೆ ಸೇರಿದ ದಾವಾ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ದುಗ್ಗಾವರ ಗ್ರಾಮದಲ್ಲಿ ನರಸಿಂಹಪ್ಪನ ಸಂಬಂಧಿಕರು ಇರುತ್ತಾರೆ ಎಂದರೆ ಸರಿ. ಸದರಿ ಸಂಬಂಧಿಕರ ಮನೆಗೆ ನರಸಿಂಹಪ್ಪ ಬರುತ್ತಿದ್ದರು ಎಂದರೆ ಸರಿ. ನನ್ನ ತಂದೆ ಸಾರಾಯಿ ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆದ ಕಾರಣ ನರಸಿಂಹಪ್ಪ ಸಾರಾಯಿ ಕುಡಿಯಲು ನಮ್ಮ ಮನೆಗೆ ಬರುತ್ತಿದ್ದ ಎಂದರೆ ಸರಿಯಲ್ಲ. ಈ ರೀತಿ ನರಸಿಂಹಪ್ಪ ಪರಿಚಯ ಆದ ಬಗ್ಗೆ ದುರುಪಯೋಗಪಡಿಸಿಕೊಂಡು ನಾನು ಆತನ ಹೆಂಡತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

6. ನರಸಿಂಹಪ್ಪನಿಗೆ ಅಪಘಾತ ಆದ ನಂತರ ಆಸ್ಪತ್ರೆಗೆ ನಾನೇ ಕರೆದುಕೊಂಡು ಹೋಗಿರುತ್ತೇನೆ. ಅವರನ್ನು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆನು. ಸದರಿ ಆಸ್ಪತ್ರೆಗೆ ದಾಖಲಾದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ಸದರಿ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಆಸ್ಪತ್ರೆ ವರದಿಯಲ್ಲಿ ನರಸಿಂಹಪ್ಪ ಕುಡಿತದಿಂದ ಮರಣ ಹೊಂದಿರುತ್ತಾನೆ ಎಂದು ಬರೆದಿರುವ ಕಾರಣ ನಾನು ಉದ್ದೇಶಪೂರ್ವಕವಾಗಿ ಆಸ್ಪತ್ರೆ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರು ನನಗೆ ಕಿರುಕುಳ ನೀಡಿರುತ್ತಾರೆ ಎಂದು ಬರೆಸಿದ್ದು ಆ ಬಗ್ಗೆ ಪೋಲೀಸ್ ದುರು ನೀಡಿರುವುದಿಲ್ಲ. ಕಿರುಕುಳ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

7. ಪಂಚಾಯತಿಯನ್ನು ಚಂದ್ರಪ್ಪ ಎನ್ನುವವರು ಮಾಡಿರುತ್ತಾರೆ. ನನ್ನ ಗಂಡ ಮರಣ ಹೊಂದಿದ 8 ವರ್ಷಗಳ ನಂತರ ಪಂಚಾಯತಿ ಮಾಡಿರುತ್ತಾರೆ. ಪಂಚಾಯತಿಯಲ್ಲಿ ಹಿಸ್ಸೆ ಕೊಡುವಂತೆ ಕೇಳಿದ್ದು , ನೀಡಿರುವುದಿಲ್ಲ. ಈ ವಿಷಯವನ್ನು ವಾದ ಪತ್ರ , ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಬರೆಸಲು ನನಗೆ ತೊಂದರೆ ಇರಲಿಲ್ಲ.

**ವಕೀಲರು ಮುಂದುವರೆದ** ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.